


ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ತರಗತಿಯಲ್ಲಿ ಮಗ್ನರಾದ ಜಮೀಲಾ ಮೇಡಂ

ಮಕ್ಕಳಿದ್ದಾರೆ! 'ಮೇಡಂ, ನಾನು ಎಂಜಿನಿಯರಿಂಗ್ ಎರಡನೇ ವರ್ಷದವರೆಗೂ ಚಿಮಣಿ ದೀಪದಲ್ಲಿಯೇ ಓದಿದ್ದು' ಎಂದು ಮಹೇಶ್ ಹೇಳಿದರು. ತಮ್ಮ ಬದುಕಿನ ಕತ್ತಲನ್ನು ಕಡಿದುಕೊಂಡ ಮಹೇಶ್, ಈ ಮಕ್ಕಳ ಬದುಕಿಗೆ ಹಣತೆ ಹಚ್ಚುತ್ತಿದ್ದಾರೆ. ಮಹೇಶ್, ಭೀಮಾಬಾಯಿ ಗುಡಿಸಲಿಗೆ ಸೆಲ್ಕೊ ಕಂಪನಿಯ ಸಹಾಯದಿಂದ 10 ವರ್ಷಗಳಾದರೂ ಬಾಳಿಕೆ ಬರುವ ಸೋಲಾರ್ ದೀಪವನ್ನು ಹಾಕಿಸಿದ್ದಾರೆ, ಈಗ ಬೆಳಕು ಬಂದ ಸಂಭ್ರಮ.

ಈ ಸೈಟಿನ ಸುತ್ತಲೂ ಅದಾಗಲೆ ಏರು ಎತ್ತರದ ಕಟ್ಟಡಗಳು ಎದ್ದಿವೆ. ಬೆಳಗ್ಗೆ ಶೌಚಕ್ಕೆ ಎಷ್ಟು ದೂರಕ್ಕೆ, ಎಷ್ಟು ಹೊತ್ತಿಗೆ, ಹೇಗೆ ಹೋಗುತ್ತಾರೆ ಎಂಬೆಲ್ಲ ನನ್ನ ಪ್ರಶ್ನೆಗಳನ್ನು ಒಳಗೇ ಅದುಮಿಟ್ಟೆ, ಅವರ ಉತ್ತರ ಕೇಳಬಲ್ಲ ಧೈರ್ಯ ಉಳಿದಿರಲಿಲ್ಲ. ಕೋಣೆಗೇ ಅಟ್ಯಾಚ್ಡ್ ಟಾಯ್ಲೆಟ್ ಅಂಟಿಸಿಕೊಂಡ ನನ್ನಂತಹ ಮಂದಿಗೆ ಇವರ ಸ್ಥಿತಿ ಅರ್ಥವಾಗಬಲ್ಲದೆ? ಲಕಲಕ ಹೊಳೆವ ಮಾಲ್‌ಗಳ ಬೆಂಗಳೂರು ನಗರದಲ್ಲಿ, ಗಗನಚುಂಬಿ ದಂತಗೋಪುರದಲ್ಲಿ ವಾಸಿಸುವ ಬಹುಪಾಲು ಜನರಿಗೆ ಇದೇ ನಗರದಲ್ಲಿ ವಿದ್ಯುತ್ ಇಲ್ಲದ, ಶೌಚಾಲಯವಿಲ್ಲದ, ತಗಡಿನ ಗುಡಿಸಲುಗಳಲ್ಲಿ ಓದುವ ಮಕ್ಕಳಿದ್ದಾರೆ ಎಂದು ಅರಿವಿಲ್ಲ.

ಭೀಮಾಬಾಯಿ ಮುಂದುವರೆಸಿ ಹೇಳಿದಳು– 'ಅಕ್ಕ ಶಿವಮ್ಮನನ್ನು ಓದಿಸಲಿಲ್ಲ. ಅಮ್ಮನ ಜೊತೆಯಲ್ಲಿ ಕೂಲಿ ಕೆಲಸಕ್ಕೆ ಆಕೆ ಬೇಕಿತ್ತು. ಅಪ್ಪ 2013ರಲ್ಲಿ ಹೃದಯಾಘಾತದಿಂದ ಇಲ್ಲಿಯೇ ತೀರಿಕೊಂಡರು. ಅಮ್ಮ ಗಾರೆ ಕೆಲಸ ಮಾಡುವಳು, ಮೊದಲೆಲ್ಲ ದಿನಗೂಲಿ 150–200 ರೂಪಾಯಿ ಮಾತ್ರ ಇತ್ತು. ಅಕ್ಕ ಅವರಿಗೆ ಜೊತೆಯಾದಳು. ಚಿಕ್ಕವಯಸ್ಸಿಗೇ ಅಕ್ಕ ಗಾರೆ ಕೆಲಸಕ್ಕೆ ಇಳಿದಳು. ಅಮ್ಮ ಮತ್ತು ಅಕ್ಕ ಬೆಳಗ್ಗೆ ಹೋಗಿ, ರಾತ್ರಿ ಬರೋದು'. ಇದೇ ದಿನಚರಿ ಇಷ್ಟೆಲ್ಲ ವರ್ಷಗಳು ಮುಂದುವರೆಯಿತು. ಈಗ ಅಕ್ಕನಿಗೆ ಇದೇ ತಿಂಗಳು ಮದುವೆಯಾಗಿತ್ತು.

'ಅಣ್ಣ ಸಾಬಣ್ಣ, ಸರ್ಕಾರಿ ಕಲಾ ಕಾಲೇಜಿನಲ್ಲಿ ಬಿ.ಎ. ಮಾಡುತ್ತಿದ್ದಾನೆ. ಜೊತೆಯಲ್ಲಿ ಆತನೂ ಒಂದಿಷ್ಟು ಗಾರೆ ಕೆಲಸ ಮಾಡಿ, ಕಾಲೇಜಿಗೆ ಹೋಗುವುದು' ಭೀಮಾ ವಿವರಿಸಿದಳು. ಭೀಮಾಬಾಯಿಯ ನಂತರ ಹುಟ್ಟಿದ ಮೂವರು ತಂಗಿಯರು – ರಾಜೇಶ್ವರಿ, ಮಾಳಮ್ಮ, ದುರ್ಗಮ್ಮ.

ಅಪ್ಪ ಸತ್ತಾಗ, ಮೂರನೇ ತಂಗಿ ಕೈಗೂಸು. ಆ ಕೂಸು ಹುಟ್ಟಿದಾಗ, ಭೀಮಾಬಾಯಿ ಶಾಲೆ ಬಿಡಬೇಕಾಯಿತು. ಇನ್ನೂ ಎದೆಹಾಲು ಕುಡಿಯುವ ಆ ಕೂಸನ್ನು ಭೀಮಾಬಾಯಿ ಹೊತ್ತುಕೊಂಡು ಅಮ್ಮನ ಹಿಂದೆ ಗಾರೆ ಕೆಲಸ ಮಾಡುವ